**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಸ್ಪೆಷಲ್ ಸಿ. ಸಂಖ್ಯೆ: 150/2023**

**ಪಿರ್ಯಾದುದಾರರು** ः ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿ** ः ರವಿ ಬಿನ್ ಕರಿಕುಮಾರ, 21 ವರ್ಷ, ವಾಡೇದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

*******

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313ರಡಿಯಲ್ಲಿ ಆರೋಪಿ ಹೇಳಿಕೆ**

**ಪ್ರಶ್ನೆ 1.** ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಕೇಳಿದ್ದೀರಾ?

ಉತ್ತರ:-

**ಪ್ರಶ್ನೆ 2.** ಪ್ರಾ.ಸಾ.1 ಪಿರ್ಯಾದುದಾರ ಶಿವಮ್ಮ ತನ್ನ ನುಡಿ ಸಾಕ್ಷ್ಯದಲ್ಲಿ, ಚಾಸಾ.2 ಮತ್ತು 3 ನನ್ನ ಮಕ್ಕಳು, ನನಗೆ ಚಾಸಾ.4 ಮತ್ತು 5 ಗೊತ್ತು, ನಾನು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿಂದೂ ಕೊರಮ ಜಾತಿಗೆ ಸೇರಿದವಳಾಗಿರುತ್ತೇನೆ, ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು, ಆರೋಪಿತನಿಗೆ ನಮ್ಮ ಜಾತಿ ಗೊತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 3.** ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 9.00 ಗಂಟೆ ಸಮಯದಲ್ಲಿ ನಾನು ಚಾಸಾ.2 ಈತನಿಗೆ ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ ಹಿಡಿದುಕೊಂಡು ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು

ತೆಗೆದುಕೊಂಡು ಬಂದು ನನಗೆ ಡಿಕ್ಕಿ ಹೊಡೆಸಲು ಪ್ರಯತ್ನಿಸಿದ್ದು ವಿಫಲವಾಗಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

<u>**ಪ್ರಶ್ನೆ 4.**</u> ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಅದಕ್ಕೆ ನಾನು ಆರೋಪಿತನಿಗೆ ಕೇಳಲು, ಆತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ, ಅದೂ ಅಲ್ಲದೇ ಚಾಸಾ.2 ಈತನಿಗೆ ಆರೋಪಿತನು ತನ್ನ ಕೈ ಮುಷ್ಟಿಯಿಂದ ಮುಖಕ್ಕೆ ಗುದ್ದಿರುತ್ತಾನೆ, ಅದಲ್ಲದೇ, ನಮ್ಮ ಶೆಡ್ಡಿಗೆ ಬೆಂಕಿ ಹಾಕಿ ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾನೆ, ಆಗ ಆರೋಪಿತನು ನಮಗೆ ಕೊರಮ ಜಾತಿಯವರು ಎಂದು ಮೂದಲಿಸಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

<u>**ಪ್ರಶ್ನೆ 5.**</u> ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಆರೋಪಿತನು ನಮ್ಮ ಸೈಟಿನ ಪಕ್ಕದಲ್ಲಿಯೇ ಮನೆ ಕಟ್ಟಿದ್ದು ಆತನು ನಮ್ಮ ಸೈಟಿನಲ್ಲಿಯೇ ಹಾಯ್ದು ಹೋಗುತ್ತಿದ್ದುದ್ದರಿಂದ, ಅದನ್ನು ಕೇಳಿದ್ದಕ್ಕೆ ಆ ದ್ವೇಷ ಇಟ್ಟುಕೊಂಡು ನಮಗೆ ಹೀಗೆ ಮಾಡಿರುತ್ತಾನೆ, ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ನಿಶಾನೆ ಪಿ 1 ರಂತೆ ದೂರನ್ನು ನೀಡಿರುತ್ತೇನೆ, ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

<u>**ಪ್ರಶ್ನೆ 6.**</u> ಪ್ರಾ.ಸಾ.1 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಮಾರನೇಯ ದಿನ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ನಿಶಾನೆ ಪಿ 2 ರಂತೆ ಪಂಚನಾಮೆಯನ್ನು ಮಾಡಿ, ನಿಶಾನೆ ಪಿ 3 ಮತ್ತು 4 ರಂತೆ ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 7.** ಪ್ರಾ.ಸಾ.2 ರವೀಶ ತನ್ನ ನುಡಿ ಸಾಕ್ಷ್ಯದಲ್ಲಿ, ಚಾಸಾ.1 ನನ್ನ ತಾಯಿ, ಚಾಸಾ.3 ನನ್ನ ಅಣ್ಣ, ನಾನು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿಂದೂ ಕೊರಮ ಜಾತಿಗೆ ಸೇರಿದವನಾಗಿರುತ್ತೇನೆ, ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು, ಆರೋಪಿತನಿಗೆ ನಮ್ಮ ಜಾತಿ ಗೊತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 8.** ಪ್ರಾ.ಸಾ.2 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 9.30 ಗಂಟೆ ಸಮಯದಲ್ಲಿ ನನಗೆ ಚಾಸಾ.1 ಇವಳು ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ ಹಿಡಿದುಕೊಂಡು ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ನನಗೆ ಡಿಕ್ಕಿ ಹೊಡೆಸಲು ಪ್ರಯತ್ನಿಸಿದ್ದು ವಿಫಲವಾಗಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 9.** ಪ್ರಾ.ಸಾ.2 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಅದಕ್ಕೆ ನಾವು ಆರೋಪಿತನಿಗೆ ಕೇಳಲು, ಆತನು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ, ಅದೂ ಅಲ್ಲದೇ ನನಗೆ ಆರೋಪಿತನು ತನ್ನ ಕೈ ಮುಷ್ಟಿಯಿಂದ ಮುಖಕ್ಕೆ ಗುದ್ದಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**ಪ್ರಶ್ನೆ 10.** ಪ್ರಾ.ಸಾ.3 ಶಿವಣ್ಣ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ.1 ನನ್ನ ತಾಯಿ, ಚಾಸಾ.2 ನನ್ನ ತಮ್ಮ, ನಾವು ಪರಿಶಿಷ್ಟ ಪಂಗಡಕ್ಕೆ ಸೇರಿದ ಹಿಂದೂ ಕೊರಮ ಜಾತಿಗೆ

ಸೇರಿದವರಾಗಿರುತ್ತೇವೆ, ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು, ಆರೋಪಿತನಿಗೆ ನಮ್ಮ ಜಾತಿ ಗೊತ್ತು, ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 11.</u>** ಪ್ರಾ.ಸಾ.3 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 10.00-10.30 ಗಂಟೆ ಸಮಯದಲ್ಲಿ ಚಾಸಾ.2 ಈತನಿಗೆ ಚಾಸಾ.1 ಇವಳು ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ ಹಿಡಿದುಕೊಂಡು ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದು ಚಾಸಾ.1 ಇವಳಿಗೆ ಡಿಕ್ಕಿ ಹೊಡೆದಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**<u>ಪ್ರಶ್ನೆ 12.</u>** ಪ್ರಾ.ಸಾ.3 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಅದಕ್ಕೆ ಆರೋಪಿತನಿಗೆ ಕೇಳಲು, ಆತನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ, ಅದೂ ಅಲ್ಲದೇ ಚಾಸಾ.2 ಈತನಿಗೆ ಆರೋಪಿತನು ತನ್ನ ಕೈ ಮುಷ್ಟಿಯಿಂದ ಬಲಗೆನ್ನೆಗೆ ಗುದ್ದಿರುತ್ತಾನೆ, ಅದರಂತೆ ನನ್ನ ತಾಯಿಯಾದ ಚಾಸಾ.1 ಇವಳಿಗೂ ಸಹ ಹೊಡೆದಿರುತ್ತಾನೆ, ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ನಮ್ಮ ಶೆಡ್ಡಿಗೆ ಬೆಂಕಿ ಹಾಕುತ್ತೇನೆ ಎಂದೂ ಸಹ ಬೆದರಿಕೆ ಹಾಕಿರುತ್ತಾನೆ, ಎಂದು ಸಾಕ್ಷಿ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**<u>ಪ್ರಶ್ನೆ 13.</u>** ಪ್ರಾ.ಸಾ.4 ಊದೇಶ ರವರು ತನ್ನ ನುಡಿ ಸಾಕ್ಷ್ಯದಲ್ಲಿ, ನನಗೆ ಚಾಸಾ.1 ರಿಂದ 3 ಗೊತ್ತು, ಸದರಿಯವರು ಹಿಂದೂ ಸೇರಿದ ಹಿಂದೂ ಕೊರಮ ಜಾತಿಗೆ

ಸೇರಿದವರಾಗಿರುತ್ತಾರೆ, ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು, ಆರೋಪಿತನಿಗೆ ಸದರಿಯವರ ಜಾತಿ ಗೊತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 14.** ಪ್ರಾ.ಸಾ.4 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಈಗ ಸುಮಾರು 9-10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 11.00 ಗಂಟೆ ಸಮಯದಲ್ಲಿ ಚಾಸಾ.2 ಈತನಿಗೆ ಚಾಸಾ.1 ಇವಳು ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ ಹಿಡಿದುಕೊಂಡು ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದಿದ್ದಕ್ಕೆ ಚಾಸಾ.1 ಇವಳು ಪ್ರಶ್ನಿಸಿರುತ್ತಾಳೆ, ಅದಕ್ಕೆ ಆರೋಪಿತನು ಚಾಸಾ.1 ಮತ್ತು ಚಾಸಾ.2 ರವರಿಗೆ ಹೊಡೆದು ಬಂದಿರುತ್ತಾನೆ, ಚಾಸಾ.1 ಮತ್ತು ಚಾಸಾ.2 ರವರಿಗೆ ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 15.** ಪ್ರಾ.ಸಾ.4 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ಮಾರನೇ ದಿನ ಮಧ್ಯಾಹ್ನ ಸುಮಾರು 1.00 ಗಂಟೆ ಸಮಯದಲ್ಲಿ ಚಾಸಾ.1 ಮತ್ತು 2 ಇವರ ತೋರಿಕೆಯ ಮೇರೆಗೆ ಘಟನಾ ಸ್ಥಳಕ್ಕೆ ಪೊಲೀಸರು ಬಂದು ನಿಶಾನೆ ಪಿ 2 ರಂತೆ ಸ್ಥಳ ಪಂಚನಾಮೆಯನ್ನು ಮಾಡಿ ನಿಶಾನೆ ಪಿ 2(ಎ) ರಂತೆ ನನ್ನ ಸಹಿಯನ್ನು ಪಡೆದು, ಅ ಸಮಯದಲ್ಲಿ ಪೊಲೀಸರು ನಿಶಾನೆ ಪಿ 3 ಮತ್ತು 4 ರಂತೆ ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ, ಎಂದು ಸಾಕ್ಷಿ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**ಪ್ರಶ್ನೆ 16.** ಪ್ರಾ.ಸಾ.8 ಎಸ್.ಆರ್.ಕವಡಿಮಠ, ಹೆಚ್.ಸಿ.520 ರವರು ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕ 22.08.2023 ರಂದು ವಾಡೆದೊಡ್ಡಿಯಲ್ಲಿರುವ ಆರೋಪಿತನ ಮನೆಯ ಮುಂದೆ ನಿಲ್ಲಿಸಿದ್ದ ಆರೋಪಿತನು ಉಪಯೋಗಿಸಿದ್ದ ದ್ವಿಚಕ್ರ ವಾಹನ ಸಂಖ್ಯೆ. ಕೆಎ-42,ಇಇ-9268ನ್ನು ತಂದು ಚಾಸಾ.13 ಇವರ ಮುಂದೆ ನಿಶಾನೆ ಪಿ 7 ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ, ನಿಶಾನೆ ಪಿ 8 ರಿಂದ 10 ಸದರಿ ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ 3 ವರ್ಣರಂಜಿತ ಛಾಯಾಚಿತ್ರಗಳಾಗಿರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**ಪ್ರಶ್ನೆ 17.** ಪ್ರಾ.ಸಾ.9 ಪದ್ಮಶಂಕರ್, ಎಎಸ್ಐ ರವರು ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕ 12.08.2023 ರಂದು ಸಂಜೆ 5.00 ಗಂಟೆಗೆ ಪಿರ್ಯಾದಿ ನಾಗಮ್ಮ ಠಾಣೆಗೆ ಹಾಜರಾಗಿ ನಿಶಾನೆ ಪಿ 1 ರಂತೆ ನೀಡಿದಂತಹ ದೂರನ್ನು ಸ್ವೀಕರಿಸಿಕೊಂಡು ನಿಶಾನೆ ಪಿ 11 ರಂತೆ ಗುನ್ನೆ ಸಂಖ್ಯೆ.138/2023 ರಲ್ಲಿ ದಾಖಲಿಸಿಕೊಂಡಿರುತ್ತೇನೆ, ಎಂದು ಸಾಕ್ಷಿ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**ಪ್ರಶ್ನೆ 18.** ಪ್ರಾ.ಸಾ.10 ಓಂ ಪ್ರಕಾಶ್, ಡಿವೈಎಸ್ಪಿ ರವರು ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕ 13.08.2023 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಿರ್ಯಾದಿ ನಾಗಮ್ಮ ತೋರಿಸಿದಂತಹ ಸ್ಥಳದಲ್ಲಿ ಪಂಚರಾದ ಪ್ರಾಸಾ.4 ಮತ್ತು 5 ರ ಸಮಕ್ಷಮ ನಿಶಾನೆ ಪಿ 2 ರಂತೆ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 11.00ರಿಂದ 11.45ರ ಸಮಯದಲ್ಲಿ ನಡೆಸಿ, ನಿಶಾನೆ ಪಿ 3 ಮತ್ತು 4 ರಂತೆ ಸ್ಥಳದಲ್ಲಿ ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಯಲಾಗಿದ್ದು, ನಿಶಾನೆ ಪಿ 12 ಸ್ಥಳದ ಕಚ್ಚಾ ನಕ್ಷೆಯನ್ನೂ ತಯಾರಿಸಿ, ಛಾಯಾಚಿತ್ರಗಳನ್ನು ತೆಗೆದಂತಹ ಠಾಣಾ ಸಿಬ್ಬಂದಿಯಾದ ಚಾಸಾ.9 ಅವರಿಂದ ನಿಶಾನೆ ಪಿ

13 ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65ಬಿರನ್ವಯ ಪ್ರಮಾಣ ಪತ್ರವನ್ನು ಪಡೆಯಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 19.** ಪ್ರಾ.ಸಾ.10 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 14.08.2023 ರಂದು ಪಿರ್ಯಾದುದಾರ, ಗಾಯಾಳು ಮತ್ತು ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಕನಕಪುರ ತಹಶೀಲ್ದಾರ್ ಅವರಿಗೆ ಮತ್ತು ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕನಕಪುರ ವೈದ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 20.** ಪ್ರಾ.ಸಾ.10 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 22.08.2023 ರಂದು ಕೃತ್ಯಕ್ಕೆ ಉಪಯೋಗಿಸಿದ ದ್ವಿಚಕ್ರ ವಾಹನ ಕಪ್ಪು ನೀಲಿ ಮತ್ತು ಸಿಮೆಂಟ್ ಬಣ್ಣದ ದ್ವಿಚಕ್ರ ವಾಹನವಾದ ಕೆಎ-42ಇಇ-9268 ಬಜಾಜ್ 125 ಎಕ್ಸ್ ವಾಹನವನ್ನು ಪ್ರಾಸಾ.8 ತಂದು ಹಾಜರುಪಡಿಸಿದ್ದು ಪಂಚರಾದ ಪ್ರಾಸಾ.6 ಮತ್ತು 7ರ ಸಮಕ್ಷಮ ಬೆಳಿಗ್ಗೆ 11.00ರಿಂದ 12.00 ಗಂಟೆ ಸಮಯದಲ್ಲಿ ನಿಶಾನ ಪಿ 5 ರಂತೆ ಅಮಾನತ್ತು ಪಡಿಸಿಕೊಂಡು ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 21.** ಪ್ರಾ.ಸಾ.10 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 11.09.2023 ರಂದು ಕನಕಪುರ ತಾಲ್ಲೂಕು ಕಚೇರಿಯಿಂದ ಪಿರ್ಯಾದಿ ಮತ್ತು ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ನಿಶಾನೆ ಪಿ 6 ರಂತೆ ಪಡೆದುಕೊಂಡು ಅದನ್ನು

ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 22.** ಪ್ರಾ.ಸಾ.10 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 21.09.2023 ರಂದು ಫಿರ್ಯಾದಿ ನಾಗಮ್ಮನ ಮುಂದುವರಿದ ಹೇಳಿಕೆ, ಗಾಯಾಳು ರವೀಶ್‌ನ ಹೇಳಿಕೆ ಮತ್ತು ಸಾಕ್ಷಿ ಶಿವಣ್ಣ ಮತ್ತು ಉದೇಶ್ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ :

**ಪ್ರಶ್ನೆ 23.** ಪ್ರಾ.ಸಾ.10 ರವರು ಮುಂದುವರಿದು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 05.10.2023ರಂದು ಗಾಯಾಳು ರವೀಶ್ ಅವರ ನಿಶಾನೆ ಪಿ 14 ಗಾಯದ ಪ್ರಮಾಣ ಪತ್ರವನ್ನು ಕನಕಪುರ ಸರ್ಕಾರಿ ಆಸ್ಪತ್ರೆಯಿಂದ ಸ್ವೀಕರಿಸಿ ಅದನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**ಪ್ರಶ್ನೆ 24.** ಪ್ರಾ.ಸಾ.11 ಡಾ.ನರಸಿಂಹಮೂರ್ತಿ ರವರು ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕ 12.08.2023 ರಂದು ಬೆಳಿಗ್ಗೆ 11.50 ಗಂಟೆ ಸಮಯದಲ್ಲಿ ರವೀಶ ಎಂ. ಎಂಬ ವ್ಯಕ್ತಿ ಹಲ್ಲೆ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು, ಆತನನ್ನು ಆತನ ಸಹೋದರ ಶಿವಣ್ಣ ಆಸ್ಪತ್ರೆಗೆ ಕರೆತಂದಿದ್ದು ಆತನನ್ನು ಪರೀಕ್ಷಿಸಿದಾಗ ಆತನ ಎಡ ಕಣ್ಣಿನ ಕೆಳಗೆ ರಕ್ತ ಹೆಪ್ಪುಗಟ್ಟಿದ ಗಾಯ ಕಂಡುಬಂದಿದ್ದು, ಅದು ಸಾಮಾನ್ಯ ಸ್ವರೂಪದ್ದಾಗಿದ್ದು, ನಿಶಾನೆ ಪಿ

14 ರಂತೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ, ಕೈಯಿಂದ ಗುದ್ದಿ ಕಾಲಿನಿಂದ ಒದ್ದು ಹಲ್ಲೆ ಮಾಡಿದರೆ ಸದರಿ ಗಾಯ ಆಗುವ ಸಾಧ್ಯತೆ ಇದೆ, ಎಂದು ಸಾಕ್ಷಿ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**ಪ್ರಶ್ನೆ 25.** ಪ್ರಾ.ಸಾ.12 ಸೌಮ್ಯ, ಡಬ್ಲ್ಯೂ ಪಿಸಿ 18 ರವರು ತನ್ನ ನುಡಿ ಸಾಕ್ಷ್ಯದಲ್ಲಿ, ದಿನಾಂಕ 13.08.2023 ರಂದು ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 138/2023 ರಲ್ಲಿ ತನಿಖಾಧಿಕಾರಿಗಳ ಜೊತೆ ಮಹಜರ್ ಕ್ರಮ ಜರುಗಿಸಲು ವಾಡೆದೊಡ್ಡಿ, ಕನಕಪುರ ತಾಲ್ಲೂಕಿಗೆ ಹೋಗಿದ್ದು, ಈ ಪ್ರಕರಣದ ತನಿಖಾಧಿಕಾರಿಯಾದ ಡಿವೈಎಸ್‌ಪಿ ರವರು ಮಹಜರ್ ಕ್ರಮ ಜರುಗಿಸುತ್ತಿದ್ದಂತಹ ಸಮಯದಲ್ಲಿ ಅವರ ಆದೇಶದ ಅನ್ವಯ ನಿಶಾನೆ ಪಿ 3 ಮತ್ತು 4 ರಂತೆ ಛಾಯಾ ಚಿತ್ರಗಳನ್ನು ತೆಗೆದು ಅದಕ್ಕೆ ಸಂಬಂಧಿಸಿದಂತೆ ನಿಶಾನೆ ಪಿ 13 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 165ಬಿ ರನ್ವಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

**ಪ್ರಶ್ನೆ 26.** ಬೇರೆ ಏನಾದರೂ ಹೇಳುವುದು ಇದೆಯೇ?

ಉತ್ತರಃ

**<u>ಪ್ರಶ್ನೆ 27.</u>** ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಲಾಗಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ)

**(ಎಂ. ಪಂಚಾಕ್ಷರಿ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ 10.11.2025.**